# ಜಿಗಣಿ ಪೊಲೀಸ್ ಠಾಣೆ

## ಬೆಂಗಳೂರು ಜಿಲ್ಲೆ. ಆನೇಕಲ್ ಉಪ ವಿಭಾಗ

**05 ಲಕ್ಷ ರೂ ಹಣಕ್ಕಾಗಿ ಅಪಹರಣ ಮಾಡಿದ ಆರೋಪಿಗಳ ಬಂಧನ ಹಾಗೂ ನೊಂದ ವ್ಯಕ್ತಿಯ ರಕ್ಷಣೆ ಬಗ್ಗೆ**

ದಿನಾಂಕ 28/03/2021 ರಂದು ರಾತ್ರಿ 8–30 ಗಂಟೆಗೆ ಜಿಗಣಿ ಹೋಬಳಿ, ಹಾರಗದ್ದೆ ಗ್ರಾಮದ ಶ್ರೀ ವಿಶ್ವಜಿತ್ ಎಂಬ ಉತ್ತರ ಪ್ರದೇಶ ಮೂಲದ ವ್ಯಕ್ತಿಯನ್ನು 04 ಜನರು ಕಾರಿನಲ್ಲಿ ಅಪಹರಿಸಿ, ಕಣ್ಣಿಗೆ ಬಟ್ಟೆ ಕಟ್ಟಿ, ರಾತ್ರಿಯಿಡಿ ಕಾರಿನಲ್ಲಿ ಸುತ್ತಾಡಿಸಿ, ಬೆಳಗಿನ ಜಾವ ಅಪಹರಣಕ್ಕೊಳಗಾದ ಶ್ರೀ ವಿಶ್ವಜಿತ್ ರವರ ಮೊಬೈಲ್‌ನಿಂದಲೇ ಅವರ ಅಣ್ಣನಿಗೆ ಕರೆ ಮಾಡಿ 05 ಲಕ್ಷ ಹಣಕ್ಕಾಗಿ ಬೇಡಿಕೆ ಒತ್ತೆ ಇಟ್ಟಿರುತ್ತಾರೆ. ಈ ಸಂಬಂಧ ಈ ದಿನ ದಿನಾಂಕ 29/03/2021 ರಂದು ಬೆಳಿಗ್ಗೆ 11–30 ಗಂಟೆಗೆ ಠಾಣೆಗೆ ಮಾಹಿತಿ ಬಂದಿದ್ದು, ಬೆಂಗಳೂರು ಜಿಲ್ಲೆ ಎಸ್.ಪಿ ಸಾಹೇಬರಾದ ಶ್ರೀ. ರವಿ. ಡಿ. ಚನ್ನಣ್ಣನವರ್, ಐಪಿಎಸ್ ಮತ್ತು ಅಡಿಷನಲ್ ಎಸ್.ಪಿ ಸಾಹೇಬರಾದ ಶ್ರೀ. ಲಕ್ಷ್ಮೀಗಣೇಶ್, ಕೆ.ಎಸ್.ಪಿಎಸ್, ಹಾಗೂ ಆನೇಕಲ್ ಉಪ ವಿಭಾಗದ ಡಿವೈ.ಎಸ್.ಪಿ ಸಾಹೇಬರಾದ ಶ್ರೀ. ಡಾ|| ಹೆಚ್.ಎಂ. ಮಹದೇವಪ್ಪ, ಕೆ.ಎಸ್.ಪಿ.ಎಸ್ ರವರ ಮಾರ್ಗದರ್ಶನದಲ್ಲಿ 02 ತಂಡಗಳನ್ನು ನೇಮಕ ಮಾಡಿರುತ್ತಾರೆ. ಜಿಗಣಿ ಪೊಲೀಸ್ ಠಾಣೆಯ ಪೊಲೀಸ್ ಇನ್ಸ್‌ಪೆಕ್ಟರ್ ಬಿ.ಕೆ ಶೇಖರ್ ರವರು, ಪೊಲೀಸ್ ಸಬ್‌ಇನ್ಸ್‌ಪೆಕ್ಟರ್ ಶ್ರೀ ಶಿವಲಿಂಗನಾಯಕ್ ಹಾಗೂ ತಮ್ಮ ಕ್ರೈಂ ಸಿಬ್ಬಂದಿಯವರು ಅಪಹರಣ ಮಾಡಿದ ಆರೋಪಿಗಳು ಹಾಗೂ ಅಪಹರಣಕ್ಕೊಳಾದ ವ್ಯಕ್ತಿಯನ್ನು ತಮಿಳುನಾಡು, ಹೊಸೂರು ಬಳಿಯ ಜೂಂಕಾ ಬಳಿಯ ನೀಲಗಿರಿ ತೋಪಿನಲ್ಲಿ ಬಂಧಿಸಲಾಗಿದೆ. ಅಪಹರಣಕ್ಕೊಳಗಾದ ವ್ಯಕ್ತಿಗೆ ಆರೋಪಿಗಳು ಮಾರಕಾಸ್ತ್ರಗಳಿಂದ ಹಲ್ಲೆ ಮಾಡಿದ್ದು, ಆತನಿಗೆ ಸೂಕ್ತ ಚಿಕಿತ್ಸೆ ಕೊಡಿಸಿರುತ್ತೆ.

ಪೊಲೀಸರಿಗೆ ಮಾಹಿತಿ ಬಂದ 04 ಗಂಟೆಯ ಒಳಗಾಗಿ ಅಪಹರಣ ಮಾಡಿದ ಆರೋಪಿಗಳನ್ನು ದಸ್ತಗಿರಿ ಮಾಡಿ ಹಾಗೂ ಅಪಹರಣಕ್ಕೊಳಗಾದ ನೊಂದ ವ್ಯಕ್ತಿಯನ್ನು ರಕ್ಷಿಸಿರುವ ಹಾಗೂ ಅಪಹರಣಕ್ಕೆ ಉಪಯೋಗಿಸಿದ ಕೆಎ–51 ಎಬಿ–6589 ಪೋರ್ಡ್ ಕಾರನ್ನು ( ಝೂಂ ಕಾರನ್ನು) ಜಿಗಣಿ ಪೊಲೀಸರ ಕಾರ್ಯಕ್ಕೆ ಹಿರಿಯ ಅಧಿಕಾರಿಗಳು ಪ್ರಶಂಸೆ ವ್ಯಕ್ತಪಡಿಸಿರುತ್ತಾರೆ.

ಅಪಹರಣ ಮಾಡಿದ ಆರೋಪಿಗಳ ವಿವರ

1. ಜಾಹಿದ್ ಹುಸೇನ್
2. ರೂಪೇಶ್
3. ಅಮೀನ್
4. ಸಮೀರ್ ಪಾಷ
5. ಷಾಭಾಸ್
6. ಮಹಮದ್ ಅದ್ನಾನ್

<u>ಅಪಹರಣಕ್ಕೊಳಗಾದ ನೊಂದ ವ್ಯಕ್ತಿ</u>

ಶ್ರೀ ವಿಶ್ವಜಿತ್ ಬಿನ್ ಶ್ರೀಸಂತ್ರೋಶ್, 23 ವರ್ಷ, ಕಾರ್ಪೆಂಟರ್ ಕೆಲಸ, ಸ್ವಂತ ಊರು. ಗೌರವಪುರ, ಮಹರಾಜಪುರ, ಉತ್ತರ ಪ್ರದೇಶ. ವಾಸ. ಈಗ್ಗೆ 03 ವರ್ಷದಿಂದ ಹಾರಗದ್ದೆ ಗ್ರಾಮ, ಜಿಗಣಿ ಹೋಬಳಿ, ಆನೇಕಲ್ ತಾಲ್ಲೂಕ್.